ಸಂಪುಟ: 01 ಸಂಚಿಕೆ: 05 ಪುಟ: 04 ಬೆಲೆ: 02 ಮಂಗಳವಾರ ಜೂನ್ 09 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ

ಸತ್ಯದ ಧ್ವನಿ... ಜನರ ನುಡಿ....

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು

Volume:01 Issue:05 Pages:04 Price:02 TUESDAY JUNE 09 2026 RNI NO: KNKAN/26/A4008 E-mail:ajathashathru2026@gmail.com




## ಮಳೆಯಿಂದಾಗಿ ತರಕಾರಿ ಬೆಲೆಯಲ್ಲಿ ದಿಢೀರ್ ಏರಿಕೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ರಾಜ್ಯದ ವಿವಿಧೆಡೆ ಸುರಿಯುತ್ತಿರುವ ಮಳೆಯಿಂದಾಗಿ ತರಕಾರಿಗಳ ಬೆಲೆ ಗಗನಕ್ಕೇರಿದ್ದು, ಗ್ರಾಹಕರ ಜೇಬಿಗೆ ಕತ್ತರಿ ಬೀಳುತ್ತಿದೆ. ಹೆಚ್ಚಾಗಿ ತರಕಾರಿ ಬೆಳೆಯುವ ಪ್ರದೇಶಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು ಪ್ರದೇಶಗಳಲ್ಲಿ ಕಳೆದ ಕೆಲವು ದಿನಗಳಿಂದ ಮಳೆಯಾಗುತ್ತಿದ್ದು, ತರಕಾರಿ ಬೆಳೆಗಳು ನಾಶವಾಗಿದ್ದು, ಬೆಲೆ ಏರಿಕೆಗೆ ಕಾರಣವಾಗಿದೆ.**



ಕಳೆದ ಕೆಲವು ದಿನಗಳಿಂದ 180 ರೂ.ಗಳ ಆಸುಪಾಸಿನಲ್ಲಿದ್ದ ಹುರಳಿಕಾಯಿ ತುಸು ಇಳಿಕೆಯಾಗಿದ್ದು, ಕೆಜಿಗೆ 100–120 ರೂ.ಗೆ ಇಳಿದಿದ್ದು ಗ್ರಾಹಕರು ತುಸು ನಿರಾಳವಾಗಿದ್ದಾರೆ. ಆದರೆ ಟೊಮ್ಯಾಟೋ ಅರ್ಧಶತಕ ಭಾರಿಸಿ ಮುನ್ನುಗ್ಗುತ್ತಿದೆ. ಕೆಜಿಗೆ 50 ರೂ.ಗಳಿಂದ 60 ರೂ.ಗಳಿಗೆ ಮಾರಾಟವಾಗುತ್ತಿದೆ. ಮಧ್ಯಪ್ರಾಚ್ಯದಲ್ಲಿನ ಯುದ್ಧದಿಂದಾಗಿ ಪೆಟ್ರೋಲ್, ಡೀಸೆಲ್ ಗಗನಕ್ಕೇರಿದ್ದು, ಸಾಗಾಟ ವೆಚ್ಚ ದುಬಾರಿಯಾಗಿದ್ದರಿಂದ ಇದರ ಹೊರೆ ಗ್ರಾಹಕರ ಮೇಲೆ ಬೀಳುತ್ತಿದ್ದು, ಇಲ್ಲಿ ರೈತರು ಮತ್ತು ಗ್ರಾಹಕರಿಗೆ ನಷ್ಟವಾಗುತ್ತಿದ್ದರೆ, ಮಂಡಿ ಮಾಲೀಕರು, ದಲ್ಲಾಳಿಗಳಿಗೆ ಲಾಭವಾಗುತ್ತಿದೆ. ಬೀನ್ಸ್ 80 ರಿಂದ 100 ರೂ., ಟೊಮ್ಯಾಟೊ–50 ರಿಂದ 60 ರೂ., ಬೀಟರೂಟ್–50 ರೂ., ಎಲೆಕೋಸು–50 ರೂ., ಮೂಲಂಗಿ–ರೂ., ಹೀರೇಕಾಯಿ– 50 ರೂ.,ಕ್ಯಾಪ್ಸಿಕಂ–80 ರೂ., , ಹಸಿಮೆಣಸಿನಕಾಯಿ–80 ರೂ.ಗೆ ಮಾರಾಟವಾಗುತ್ತಿದೆ. ಸೊಪ್ಪುಗಳ ಬೆಲೆಯಲ್ಲೂ ಸಹ ಏರಿಕೆಯಾಗಿದ್ದು, ಮೆಂತ್ಯೆ ಒಂದು ಕಟ್‌ಗೆ 30 ರೂ., ಕೊತ್ತುಂಬರಿ–50 ರೂ., ಪಾಲಾಕ್–30 ರೂ., ದಂಟು– 30 ರೂ.ಗೆ ಮಾರಾಟವಾಗುತ್ತಿದೆ. ಈರುಳ್ಳಿ ಕುಸಿತ ಕಳೆದ ಕೆಲವು ತಿಂಗಳುಗಳಿಂದ ಈರುಳ್ಳಿ ಬೆಲೆ ಕುಸಿತವಾಗಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ. ಗುಣಮಟ್ಟದ ಈರುಳ್ಳಿ ಕೆಜಿಗೆ 20 ರಿಂದ 25 ರೂ.ಗೆ ಮಾರಾಟವಾಗುತ್ತಿದೆ. 100 ರೂ.ಗೆ 5 ಕೆಜಿ ಮಾರಾಟವಾಗುತ್ತಿದ್ದು, ಮಾರುಕಟ್ಟೆಯಲ್ಲಿ ಇನ್ನೂ ಕಡಿಮೆ ಬೆಲೆ ಇದೆ. ದಾವಣಗೆರೆ, ಬಳ್ಳಾರಿ, ರಾಯಚೂರು, ಚಿತ್ರದುರ್ಗ ಸೇರಿದಂತೆ ಮತ್ತಿತರ ಜಿಲ್ಲೆಗಳಿಂದ ಬೆಂಗಳೂರಿನ ಆರ್‌ಎಂಸಿ ಯಾರ್ಡ್‌ಗೆ ಅಪಾರ ಪ್ರಮಾಣದಲ್ಲಿ ಈರುಳ್ಳಿ ಬರುತ್ತಿದ್ದು, ಬೆಲೆ ಕುಸಿತಕ್ಕೆ ಕಾರಣವಾಗಿದೆ. ಕಳೆದ 2–3 ತಿಂಗಳಿನಿಂದಲೂ ಸಹ ಈರುಳ್ಳಿ ಬೆಲೆ ಮೇಲೇಳದೆ ಸ್ಥಿರತೆಯನ್ನು ಕಾಯ್ದುಕೊಂಡಿದ್ದು, ಬೆಳೆಗಾರರ ಕಣ್ಣಲ್ಲಿ ನೀರು ತರಿಸುತ್ತಿದೆ.ಉ.ಕರ್ನಾಟಕ ಭಾಗದಲ್ಲಿ ಮಳೆಯಾಗುತ್ತಿದ್ದು, ಬಿತ್ತನೆಯಾಗಿರುವ ಬೆಳೆ ನಾಶವಾಗಿದ್ದು, ಮುಂದಿನ ದಿನಗಳಲ್ಲಿ ಬೆಲೆ ಏರಿಕೆಯಾಗುವ ಸಾಧ್ಯತೆ ಇದೆ.

# ಶಾಸಕ ಹಿಟ್ನಾಳ್‌ಗೆ ಸಚಿವ ಸ್ಥಾನ ಸಿಗುತ್ತಾ..!?

## ಕಾದು ನೋಡುವ ತಂತ್ರ ಆಂತರಿಕವಾಗಿ ಹೆಪ್ಪುಗಟ್ಟಿದೆ

**ಕೊಪ್ಪಳ: ರಾಜ್ಯ ರಾಜಕಾರಣದಲ್ಲಿ ಪ್ರಸ್ತುತ ಬರಿ ಮಂತ್ರಿ ಮಂಡಲದ್ದೇ ಬಹುದೊಡ್ಡ ಚರ್ಚೆ ಜೊರಾಗಿ ಆರಂಭವಾಗಿದೆ.. ಮೊದಲ ಪಟ್ಟಿಯಲ್ಲಿ 13 ಶಾಸಕರು ಮಂತ್ರಿ ಸ್ಥಾನ ಗಿಟ್ಟಿಸಿಕೊಂಡಿದ್ದರೆ, 2ನೇ ಪಟ್ಟಿಯ ನಿರೀಕ್ಷೆಯಲ್ಲಿ ಇನ್ನುಳಿದ ಶಾಸಕರು ತಮಗೆ ಸಚಿವ ಸ್ಥಾನ ಸಿಗುತ್ತೆ ಎಂದು ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಅದರಲ್ಲಿ ಕೊಪ್ಪಳ ಶಾಸಕ ಕೆ.. ರಾಘವೇಂದ್ರ ಹಿಟ್ನಾಳ ಅವರೂ ಇದ್ದಾರೆ.**

ಶಾಸಕ ರಾಘವೇಂದ್ರ ಹಿಟ್ನಾಳ ಕೊಪ್ಪಳ ಕ್ಷೇತ್ರದಿಂದ ಸತತ ಮೂರು ಬಾರಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದಾರೆ. ಅಲ್ಲದೇ ಸಿದ್ದರಾಮಯ್ಯ ಅವರ ಪರಮಾಪ್ತ, ದತ್ತು ಪುತ್ರ ಎಂದು ಪ್ರಖ್ಯಾತಿ ಪಡೆದಿದ್ದಾರೆ. ಆದರೆ, ಹಿಟ್ನಾಳ್‌ಗೆ ಮಾತ್ರ ಮಂತ್ರಿ ಆಗುವ ಯೋಗ ಕೂಡಿ ಬರುತ್ತಿಲ್ಲ. ಒಂದೆಡೆ ಹಿಟ್ನಾಳ ಅವರ ಸಚಿವ ಸ್ಥಾನದ ಬಗ್ಗೆ ರಾಜಕೀಯದಲ್ಲಿ ಪ್ಲಸ್ ಮತ್ತು ಮೈನಸ್ ಲೆಕ್ಕಾಚಾರವೂ ಸಹ ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ. ಕಳೆದ ಕೆಲವು ದಿನಗಳ ಹಿಂದಷ್ಟೇ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ನೀಡಿದ ಬೆನ್ನಲ್ಲೇ ಡಿ.ಕೆ.ಶಿವಕುಮಾರ ಸಿಎಂ ಆಗುತ್ತಾರೆ.

ಡಿಕೆಶಿ ಮಂತ್ರಿ ಮಂಡಲದಲ್ಲಿ ರಾಘವೇಂದ್ರ ಹಿಟ್ನಾಳ ಅವರು ಮಂತ್ರಿಯಾಗುವುದು ಪಕ್ಕಾ ಎನ್ನುವ ಮಾತು ಬಲವಾಗಿ ಕೇಳಿ ಬಂದಿದ್ದವು. ಕಾಂಗ್ರೆಸ್ ಹೈಕಮಾಂಡ್ ಮಾತ್ರ ಎಲ್ಲವನ್ನೂ ಅಳೆದು ತೂಗಿ, ಜಾತಿ ಲೆಕ್ಕಾಚಾರ, ಶಾಸಕರ ಗೆಲುವಿನ ಲೆಕ್ಕಾಚಾರವನ್ನು ತಾಳೆ ಹಾಕಿ ಜಾತಿವಾರು ಗೊಂದಲವಾಗದಂತೆ ಡಿ.ಕೆ ಸಂಪುಟದಲ್ಲಿ ಆಯ್ದ 13 ಶಾಸಕರಿಗೆ ಮಾತ್ರ ಮಂತ್ರಿ ಸ್ಥಾನ ನೀಡಿದ್ದು, ಅಂದರೆ ಮೊದಲ ಪಟ್ಟಿಯಲ್ಲಿ



ಕುರುಬ ಸಮುದಾಯಕ್ಕೆ ಡಾ.ಯತೇಂದ್ರ ಸಿದ್ದರಾಮಯ್ಯ ಹಾಗೂ ಭೈರತಿ ಸುರೇಶ ಅವರಿಗೆ ಸ್ಥಾನ ನೀಡಲಾಗಿದೆ. ಇದು ಶಾಸಕ ಹಿಟ್ನಾಳ ಅವರು ವಿಚಲಿತರಾಗುವಂತೆ ಮಾಡಿದೆ. ಮೊದಲ ಪಟ್ಟಿಯಲ್ಲಿಯೇ ತಮಗೆ ಸ್ಥಾನ ಸಿಗುತ್ತೆ ಎನ್ನುವ ನಿರೀಕ್ಷೆಯಲ್ಲಿದ್ದರು. ಹೈಕಮಾಂಡ್ ಈ ನಿರ್ಧಾರವು ಹಿಟ್ನಾಳ ಪಾಳೆಯದಲ್ಲಿ ನಿರಾಶೆಯ ಭಾವನೆ ಮೂಡಿಸಿದೆ.

ಇನ್ನು ಬ್ಯಾಡಗಿ ವಿಧಾನಸಭಾ ಕ್ಷೇತ್ರದಿಂದ ಗೆದ್ದಿರುವ ಶಾಸಕ ಬಸವರಾಜ ಶಿವಣ್ಣನವರ್ ಅವರು ಕುರುಬ ಸಮುದಾಯದ ಪ್ರಭಾವಿ ನಾಯಕರಾಗಿದ್ದಾರೆ. ಅವರು 70 ವರ್ಷದ ಹಿರಿಯ ಕಾಂಗ್ರೆಸ್ ನಾಯಕರಾಗಿದ್ದಾರೆ. ಹಿಂದೆಯೂ ಅವರು ಪಕ್ಷಕ್ಕಾಗಿ ತ್ಯಾಗ ಮಾಡಿದ ರಾಜಕೀಯ ಉದಾಹರಣೆಗಳೂ ಇವೆ. ಮತ್ತೊಂದು ಮಂತ್ರಿ ಸ್ಥಾನ ಕುರುಬ ಸಮುದಾಯಕ್ಕೆ ಕೊಟ್ಟಿದ್ದೇ ಆದಲ್ಲಿ ಕಾಂಗ್ರೆಸ್ ಹೈಕಮಾಂಡ್ ಹಿರಿತನದ ಲೆಕ್ಕಾಚಾರ ಹಾಕಿದರೆ ಬಸವರಾಜ ಶಿವಣ್ಣನವರ್ ಅವರ ಪಾಲಾಗಬಹುದು.

ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ ಅವರು 45–50 ವರ್ಷದೊಳಗಿನ ವಯಸ್ಸಿನ ಆಸುಪಾಸಿನಲ್ಲಿದ್ದಾರೆ. ಇದಲ್ಲದೇ ಕೊಪ್ಪಳ ಜಿಲ್ಲೆಯ ರಾಜಕಾರಣದ ಅವಲೋಕನ ಮಾಡಿದರೆ, ಜಿಲ್ಲೆಯಲ್ಲಿ ಮೂವರು ಕಾಂಗ್ರೆಸ್ ಶಾಸಕರು ಆಯ್ಕೆಯಾಗಿದ್ದಾರೆ. ಅದರಲ್ಲಿ ಯಲಬುರ್ಗಾ ಕ್ಷೇತ್ರದ ಬಸವರಾಜ ರಾಯರಡ್ಡಿ, ಕನಕಗಿರಿ ಕ್ಷೇತ್ರದ ಶಿವರಾಜ ತಂಗಡಗಿ ಹಾಗೂ ಕೊಪ್ಪಳ ಕ್ಷೇತ್ರದಿಂದ ರಾಘವೇಂದ್ರ ಹಿಟ್ನಾಳ. ಈ ಮೂವರು ಮಂತ್ರಿ ಸ್ಥಾನಕ್ಕೆ ಪೈಟ್ ನಡೆಸಿರುವುದು ಗುಟ್ಟಾಗಿ ಉಳಿದಿಲ್ಲ. ಶಿವರಾಜ ತಂಗಡಗಿ ಸಾಮಾಜಿಕ ನ್ಯಾಯದಡಿ ನನಗೆ ಮತ್ತೆ ಮಂತ್ರಿ ಸ್ಥಾನ ಸಿಗುತ್ತೆ ಎನ್ನುವ ಕನವರಿಕೆಯಲ್ಲಿದ್ದರೆ, ಅನುಭವ ಹಾಗೂ ಹಿರಿತನದ ಲೆಕ್ಕಾಚಾರ ಹಾಕಿದರೆ ತಮಗೆ ಮಂತ್ರಿ ಸ್ಥಾನ ದೊರೆಯುತ್ತದೆ ಎನ್ನುವ ನಿರೀಕ್ಷೆಯಲ್ಲಿ ಬಸವರಾಜ ರಾಯರಡ್ಡಿ ಅವರಿದ್ದಾರೆ. ಇವರನ್ನು ಮೀರಿ ರಾಘವೇಂದ್ರ ಹಿಟ್ನಾಳ ಅವರು ಮಂತ್ರಿ ಸ್ಥಾನಕ್ಕೆ ಪೈಟ್ ನಡೆಸಿದ್ದಾರೆ.

ಒಟ್ಟಿನಲ್ಲಿ ಈ ಎಲ್ಲಾ ರಾಜಕೀಯ ಲೆಕ್ಕಾಚಾರಗಳನ್ನು ಅವಲೋಕನ ಮಾಡಿದರೆ ರಾಘವೇಂದ್ರ ಹಿಟ್ನಾಳ ಅವರಿಗೆ ಮಂತ್ರಿ ಸ್ಥಾನ ಸಿಗುತ್ತಾ..!? ಎನ್ನುವಂತಹ ಚರ್ಚೆ ಜೋರಾಗಿಯೇ ನಡೆದಿದೆ. ಶಾಸಕರ ಬೆಂಬಲಿಗರು ಮಾತ್ರ ತಮ್ಮ ನಾಯಕನ ಪರ ಹೋರಾಟ ನಡೆಸಿ, ಮಂತ್ರಿ ಸ್ಥಾನ ಕೊಡಲೇ ಬೇಕು ಎಂದು ಬಿಗಿಪಟ್ಟು ಹಿಡಿದು ಕೊಪ್ಪಳದಲ್ಲಿ ದೊಡ್ಡ ಮಟ್ಟದ ಹೋರಾಟ ನಡೆಸಿ, ಒತ್ತಡಗಳ ತಂತ್ರಗಳನ್ನು ಹೆಣೆಯುವಲ್ಲಿ ಕಾಂಗ್ರೆಸ್ ಹೈಕಮಾಂಡ್ ಗಮನ ಸೆಳೆದಿದ್ದಾರೆ. ಕಾದು ನೋಡುವ ತಂತ್ರಗಾರಿಕೆಯ ನಿಲುವನ್ನು ಶಾಸಕ ಹಿಟ್ನಾಳ ಹೊಂದಿದ್ದಾರೆ ಎಂದು ಅವರ ಆಪ್ತ ವಲಯದಲ್ಲಿ ಕೇಳಿ ಬರುತ್ತಿದೆ.

## ಪ್ರಜ್ಞಾನಂದನೊಂದಿಗೆ ಚೆಸ್ ಆಡಿದ ಸಿಎಂ ವಿಜಯ್

ಅ.ಶ. ಸುದ್ದಿ ಚೆನ್ನೈ

**ಚೆನ್ನೈ: ಐತಿಹಾಸಿಕ ನಾರ್ವೆ ಚೆಸ್ ಟೂರ್ನಿಮೆಂಟ್‌ನಲ್ಲಿ ಗೆದ್ದು ದೇಶದ ಕೀರ್ತಿಯನ್ನು ಹೆಚ್ಚಿಸಿದ ಚೆಸ್ ಲಿಟ್ಲಲ್ ಮಾಸ್ಟರ್ ಪ್ರಜ್ಞಾನಂದ ಅವರೊಂದಿಗೆ ತಮಿಳುನಾಡಿನ ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರು ಚೆಸ್ ಆಡುವ ಮೂಲಕ ಗಮನ ಸೆಳೆದಿದ್ದಾರೆ.**




ಇತ್ತೀಚೆಗೆ ಮುಕ್ತಾಯಗೊಂಡ ನಾರ್ವೆ ಚೆಸ್ ಟೂರ್ನಿಮೆಂಟ್‌ನ ವಿಸ್ಲೆ ಸೋ ಅವರನ್ನು ಮಣಿಸುವ ಮೂಲಕ ಪ್ರಜ್ಞಾನಂದ ಅವರು ಚಾಂಪಿಯನ್ ಪಟ್ಟವನ್ನು ಅಲಂಕರಿಸಿದ್ದರು. ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ತೋರಿದ್ದ ಪ್ರಜ್ಞಾನಂದ ಅವರು ಭಾರತದವರೇ ಆದ ಜಿ.ಗುಕೇಶ್, ವಿಶ್ವದ ನಂಬರ್ ಆಟಗಾರ ಮಾಗ್ನೂಸ್ ಕ್ಲಾರ್ಲೆಸ್‌ರನ್ನು ಮಣಿಸುವ ಮೂಲಕ ಫೈನಲ್ ಹಂತಕ್ಕೆ ತಲುಪಿದ್ದರು. ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಜ್ಞಾನಂದ್ ಅವರು, ವಿಜಯ್ ಅವರೊಂದಿಗೆ ಚೆಸ್ ಆಡಿದ್ದಲ್ಲದೆ ಅವರಿಗೆ (ವಿಜಯ್) ಅವರಿಗೆ ಈ ಆಟದ ಬಗ್ಗೆ ಅಪಾರ ಜ್ಞಾನ ಹೊಂದಿದ್ದಾರೆ, ಆವರೊಂದಿಗೆ ಚೆಸ್ ಆಡಿದ್ದು ತುಂಬಾ ಸಂತಸ ತಂದಿದೆ ಎಂದು ಹೇಳಿದರು. ಈ ವೇಳೆ ಪ್ರಜ್ಞಾನಂದ ಅವರ ಮುಂದಿನ ಚೆಸ್ ಭವಿಷ್ಯಕ್ಕೆ ಸಿಎಂ ವಿಜಯ್ 50 ಲಕ್ಷ ರೂ.ಗಳನ್ನು ವಿತರಿಸಿದರು. ಈ ವೇಳೆ ಪ್ರಜ್ಞಾನಂದರವರ ತಾಯಿ ನಾಗಲಕ್ಷ್ಮಿ, ಲೋಕೋ ಪಯೋಗಿ ಇಲಾಖೆ ಸಚಿವ ಆಧವ್ ಅರ್ಜುನ್ ಉಪಸ್ಥಿತರಿದ್ದರು.




## ರೈತರಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಕೊರತೆಯಾಗದಂತೆ ನಿಗಾವಹಿಸಿ: ಟಿ. ಕೃಷ್ಣಮೂರ್ತಿ




ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಮುಂಗಾರು ಬಿತ್ತನೆ ಕಾರ್ಯದಲ್ಲಿ ರೈತರು ತೊಡಗಿರುವ ಹಿನ್ನೆಲೆಯಲ್ಲಿ ಅವರಿಗೆ ಅಗತ್ಯವಾದ ಬಿತ್ತನೆ ಬೀಜ ಹಾಗೂ ರಸಗೊಬ್ಬರವನ್ನು ಸಮಯಕ್ಕೆ ಸರಿಯಾಗಿ ವಿತರಿಸಬೇಕು. ಯಾವುದೇ ರೀತಿಯ ತೊಂದರೆಯಾಗದಂತೆ ಸಂಬಂಧಿಸಿದ ಅಧಿಕಾರಿಗಳು ನಿಗಾವಹಿಸಬೇಕು ಎಂದು ತಾಲೂಕು ಪಂಚಾಯಿತಿ ಆಡಳಿತಾಧಿಕಾರಿ ಟಿ. ಕೃಷ್ಣಮೂರ್ತಿ ಸೂಚಿಸಿದರು.**

ಯಲಬುರ್ಗಾ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ವಿವಿಧ ಇಲಾಖೆಗಳ ಪ್ರಗತಿ ವರದಿಗಳನ್ನು ಪರಿಶೀಲಿಸಿದ ಅವರು, ಕಾಮಗಾರಿಗಳ ವರದಿ ಸಭೆಗೆ ಮಾತ್ರ ಸೀಮಿತವಾಗಬಾರದು. ಕಾಟಾಚಾರಕ್ಕಾಗಿ ವರದಿಗಳನ್ನು ಸಲ್ಲಿಸದೆ, ಕಾರ್ಯರೂಪದಲ್ಲಿ ಉತ್ತಮ ಪ್ರಗತಿ ಸಾಧಿಸುವತ್ತ ಅಧಿಕಾರಿಗಳು ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ತೋಟಗಾರಿಕೆ, ಕೃಷಿ, ಮಹಿಳಾ ಮತ್ತು ಶಿಶು ಅಭಿವೃದ್ಧಿ, ಸಮಾಜ ಕಲ್ಯಾಣ, ಅರಣ್ಯ, ಪಂಚಾಯತ್ ರಾಜ್, ಪಶು ಸಂಗೋಪನೆ, ರೇಷ್ಮೆ ಹಾಗೂ ಲೋಕೋಪಯೋಗಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಗಳ ಪ್ರಗತಿ ವರದಿಗಳನ್ನು ಮಂಡಿಸಿ ಮಾಹಿತಿ ನೀಡಿದರು.

## ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಶಾಸಕರಿಗೆ ಮಂತ್ರಿ ಸ್ಥಾನ ನೀಡಬೇಕು :ಬಸವನಗೌಡ ತೊಂಡಿಹಾಳ.

ಅ.ಶ. ಸುದ್ದಿ ಕುಕನೂರು

**ಕುಕನೂರು: ಡಿ.ಕೆ ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಉತ್ತರ ಕರ್ನಾಟಕದ ನಾಲ್ಕು ಜನ ಶಾಸಕರಿಗೆ ಮಂತ್ರಿ ಸ್ಥಾನ ಕೊಡಬೇಕು ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಬಸವನಗೌಡ ತೊಂಡಿಹಾಳ ಆಗ್ರಹಿಸಿದರು.**

ಅವರು ಕುಕನೂರು ಪಟ್ಟಣದಲ್ಲಿ ಸಮಾಜದ ಮುಖಂಡರಾದ ಗವಿಸಿದ್ದಪ್ಪ ಆರೇರ ಅವರ ನಿವಾಸದಲ್ಲಿ ಕುಕನೂರು ತಾಲೂಕ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ವತಿಯಿಂದ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ವೀರಶೈವ ಪಂಚಮಸಾಲಿ ಸಮಾಜ ಅತಿ ಹೆಚ್ಚು ಮತ್ತು ಬಹುದೊಡ್ಡ ಜನಸಂಖ್ಯೆಯುಳ್ಳ ಸಮಾಜವಾಗಿರುವ ನಮ್ಮ ಸಮಾಜದ ಉತ್ತರ ಕರ್ನಾಟಕದ ನಾಲ್ಕು ಜನ ಶಾಸಕರಿಗೆ ಮಂತ್ರಿ ಸ್ಥಾನ ನೀಡಬೇಕು ಎಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ ಅವರಿಗೆ ಪತ್ರಿಕಾ ಗೋಷ್ಠಿಯ ಮೂಲಕ ಆಗ್ರಹ ಮಾಡಿದರು.

ನಾಲ್ಕು ಜನ ಶಾಸಕರಿಗೆ ಮಂತ್ರಿ




ಸ್ಥಾನ ನೀಡದಿದ್ದರೆ ಲಿಂಗಾಯತ ಪಂಚಮಸಾಲಿ ಸಮಾಜದ ವತಿಯಿಂದ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು. ನಂತರ ವೀರಶೈವ ಲಿಂಗಾಯತ ಪಂಚಮಸಾಲಿ ತಾಲೂಕ ಅಧ್ಯಕ್ಷ ವೀರಣ್ಣ ಅಣ್ಣಿಗೇರಿ ಮಾತನಾಡಿ ಲಿಂಗಾಯತ ಸಮಾಜದ 38 ಜನ ಶಾಸಕರು ಇದ್ದು, 11 ಜನ ಲಿಂಗಾಯತ ಪಂಚಮಸಾಲಿ ಸಮಾಜದ ಶಾಸಕರು ಇದ್ದು, ಉತ್ತರ ಕರ್ನಾಟಕದ ಕನಿಷ್ಠ 8 ಜನ ಶಾಸಕರನ್ನು ಆಯ್ಕೆ ಮಾಡಲಿ ಮಹಿಳಾ ಕೋಟಾದಲ್ಲಿ ಶಾಸಕರಾದ ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಮಂತ್ರಿ ಸ್ಥಾನ ಕೊಡಬೇಕು. ಕನಿಷ್ಠ ನಾಲ್ಕು ಸ್ಥಾನ ಪಂಚಮಸಾಲಿ ಸಮಾಜದ ಶಾಸಕರಿಗೆ ಮಂತ್ರಿ ಸ್ಥಾನ ಕೊಡಬೇಕು.

ಮತ್ತು ಲಿಂಗಾಯತ ಕೋಟಾದಲ್ಲಿ ಯಲಬುರ್ಗಾ ಮತಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಅವರು ಆರು ಸಲ ಶಾಸಕರಾಗಿರುವ ಅವರಿಗೆ ಮಂತ್ರಿ ಸ್ಥಾನ ಕೊಡಬೇಕು ಎಂದು ಮನವಿ ಮಾಡಿದರು. ಪಂಚಮಸಾಲಿ ಸಮಾಜದ ನಾಲ್ಕು ಶಾಸಕರಿಗೆ ಮಂತ್ರಿ ಸ್ಥಾನ ಕೊಡದೆ ಇದ್ದಲ್ಲಿ ಉಗ್ರ ಹೋರಾಟ ಮಾಡುವುದಾಗಿ ಹೇಳಿದರು. ಇದೇ ವೇಳೆ ಸಮಾಜದ ಮುಖಂಡರಾದ ಈಶಪ್ಪ ಆರೇರ ಮಾತನಾಡಿ ಒಂದು ಕೋಟಿ ಇಪ್ಪತ್ತು ಲಕ್ಷ ಜನ ಸಂಖ್ಯೆ ಹೊಂದಿದಂತಹ ನಮ್ಮ ಸಮಾಜವು ಕಾಂಗ್ರೆಸ್ ಪಕ್ಷ 136 ಸೀಟುಗಳು ಬರಲು ಪಂಚಮಸಾಲಿ ಸಮಾಜದ ಕೊಡುಗೆ ಅಪಾರ ಇದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ಇಬ್ಬರು ಪಂಚಮಸಾಲಿ ಸಮಾಜದ ಶಾಸಕರಿಗೆ ಮಂತ್ರಿ ಸ್ಥಾನ ನೀಡಿದ್ದರು.

ಆದರೆ ಮುಖ್ಯಮಂತ್ರಿ ಡಿ ಕೆ ಶಿವಕುಮಾರ ಅವರು ಲಿಂಗಾಯತ ಪಂಚಮಸಾಲಿ ನಾಲ್ಕು ಜನ ಶಾಸಕರಿಗೆ ಮಂತ್ರಿ ಸ್ಥಾನ ಕೊಡಬೇಕು ಕೊಡದೆ ಇದ್ದ ಪಕ್ಷದಲ್ಲಿ ಬಹುದೊಡ್ಡದಾದ ಲಿಂಗಾಯತ ಪಂಚಮಸಾಲಿ ಸಮಾಜದ ವತಿಯಿಂದ ಉಗ್ರ ಹೋರಾಟ ಮಾಡುವುದಾಗಿ ತಿಳಿಸಿದರು. ಮಹಿಳಾ ಲಿಂಗಾಯತ ಪಂಚಮಸಾಲಿ ತಾಲೂಕ ಘಟಕದ ಅಧ್ಯಕ್ಷೆ ಉಮಾ ಗವಿಸಿದ್ದಪ್ಪ ಆರೇರ ಮಾತನಾಡಿ ನಮ್ಮ ಸಮಾಜದ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ಮಂತ್ರಿ ಸ್ಥಾನ ನೀಡಬೇಕು ಎಂದು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಮನವಿ ಮಾಡಿ ಆಗ್ರಹಿಸಿದರು. ಈ ಸಂದರ್ಭದಲ್ಲಿ ಶರಣಪ್ಪಗೌಡ ಪಾಟೀಲ್, ವಿನಾಯಕ ಬೆನಳ್ಳಿ, ಗವಿಸಿದ್ದಪ್ಪ ಆರೇರ, ಡಾ. ಬಸವರಾಜ ವೀರಾಪುರ, ಈಶಪ್ಪ ಆರೇರ, ಮಲ್ಲಪ್ಪ ಕೂಡ್ಲೂರು, ಸರಸ್ವತಿ ಎಂ ಕೂಡ್ಲೂರು, ದೀಪ ಮಲ್ಲನಗೌಡ, ಮಹೇಶ ಬನ್ನಿಕೊಪ್ಪ, ಚಂದ್ರು ಬಗನಾಳ, ಮಂಜುನಾಥ ಸೋಂಪುರ, ಬಸಪ್ಪ ಈಬೇರಿ ಸೇರಿದಂತೆ ಇತರರು ಇದ್ದರು.

# ಆಧುನಿಕ ಯುಗದಲ್ಲಿ ಜನಪದ ಸಾಹಿತ್ಯ ಮತ್ತು ಸಂಗೀತಕ್ಕೆ ಅಗ್ರ ಸ್ಥಾನವಿದೆ :ಶಿಕ್ಷಕ,ಗಾಯಕ ಹನುಮಂತಪ್ಪ

ಅ.ಶ. ಸುದ್ದಿ ಕುಕನೂರು

**ಕುಕನೂರು: ಇಂದಿನ ಯಾಂತ್ರಿಕ ಜೀವನದಲ್ಲಿ ಆಧುನಿಕ ಅಬ್ಬರದಲ್ಲಿ ಮೂಲ ಜಾನಪದ ಸಾಹಿತ್ಯ ಮತ್ತು ಸಂಗೀತವನ್ನು ಕೇಳುತ್ತಿದ್ದರೆ ಒತ್ತಡ ಕಡಿಮೆಯಾಗಿ , ಬದುಕಿಗೆ ಆಹ್ಲಾದಕರ ಅನುಭವ ಸಿಗುತ್ತದೆ ಹೀಗಾಗಿ ಜನಪದ ಸಾಹಿತ್ಯ ಸಂಗೀತಕ್ಕೆ ಹೆಚ್ಚಿನ ಮನ್ನಣೆ ದೊರೆತಿದೆ ಎಂದು ಮಂಗಳೂ-ರಿನ ಮುಖ್ಯೋಪಾಧ್ಯಾಯ ಹಾಗೂ ಗಾಯಕರಾದ ಎ.ಎಚ್.ಹನುಮಂತಪ್ಪ ಅಭಿಪ್ರಾಯ ಪಟ್ಟರು.**

ಅವರು ಭಾನುವಾರದಂದು ಸ್ಥಳೀಯ ಅನ್ನದಾನೀಶ್ವರ ಮಠದಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್ ಕುಕನೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಪ್ಪಳ ಇವರ ಸಂಯುಕ್ತ ಆಶ್ರಯದಲ್ಲಿ 2025--26 ನೆಯ ಸಾಲಿನ ಸಂಘ ಸಂಸ್ಥೆ ಧನ ಸಹಾಯ ಯೋಜನೆಯಡಿಯಲ್ಲಿ ಹಮ್ಮಿಕೊಂಡ ಸಂಗೀತ ಸಂಭ್ರಮ ಕಾರ್ಯಕ್ರಮದಲ್ಲಿ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಜನಪದ ಮತ್ತು ಸಂಗೀತ




ಕಲೆಗಳು ಅವಲೋಕನ ಕುರಿತು ಮಾತನಾಡಿದರು. ಕವಿರಾಜ ಮಾರ್ಗ ಚರಿತ್ರೆಯಲ್ಲಿ ಕನ್ನಡ ಸಾಹಿತ್ಯ ಹಾಗೂ ಜನಪದ ಸಾಹಿತ್ಯದ ಉಲ್ಲೇಖವಿದೆ ಹಿಂದಿನ ಹಿರಿಯರು ಓದು ಬರಹ ಇಲ್ಲದವರು, ಅವರು ಮಾತನಾಡಿದ, ಬಿಸುವಾಗ ಹಾಡಿದ, ಕುಟ್ಟುವಾಗ ಹಾಡಿದ ಬದುಕಿನ ಸನ್ನಿವೇಶಗಳೇ ಜಾನಪದ ಸಾಹಿತ್ಯ ವಾಗಿ ಅನಾವರಣ ಗೊಂಡಿವೆ, ನಂತರ ವಚನ ಸಾಹಿತ್ಯ, ದಾಸ ಪರಂಪರೆಯ ಮೂಲಕ ಕನ್ನಡದ ಜನಪದ ಮತ್ತು ಸಂಗೀತ ಕ್ಷೇತ್ರದ ಪ್ರಗತಿಗೆ ಪೂರಕ ವಾಗಿವೆ, ಯುವ ಜನಾಂಗ ಹಾಗೂ ಸಂಘ ಸಂಸ್ಥೆಗಳು ಸತತ ಪರಿಶ್ರಮದಿಂದ ಜನಪದ ಸಂಗೀತ ಕ್ಷೇತ್ರದ ಉಳಿವಿಗೆ ಶ್ರಮಿಸಲು ಮುಂದಾಗಬೇಕಿದೆ ಎಂದರು. ಶಿರೂರು ಗ್ರಾಮದ ರಂಗಭೂಮಿ ಕಲಾವಿದ ಶೇಖರೆಡ್ಡಿ ಮಾದಿನೂರ ಅಧ್ಯಕ್ಷತೆ ವಹಿಸಿದ್ದರು.


ಶ್ರೀಮಠದ ಆಡಳಿತಾಧಿಕಾರಿ ಸಂಗಮೇಶ ಕಲ್ಮಠ, ಕಲ್ಯಾಣ ಕರ್ನಾಟಕ ಜಾನಪದ ಕಲಾವಿದರ ಸಂಘದ ಕುಕನೂರು ತಾಲೂಕು ಅಧ್ಯಕ್ಷ ಬಸವರಾಜ್ ಕೊಡ್ಲಿ, ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಸವರಾಜ ಉಪ್ಪಿನ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕಳಕಪ್ಪ ಕುಂಬಾರ ,ಮುಖಂಡರಾದ ಈರಪ್ಪ ಇಟಗಿ, ಅಂದಪ್ಪ ಭಂಡಾರಿ, ಭಜನಾ ಕಲಾವಿದ ಚಂದ್ರಪ್ಪ ಅರಬೆರಳಿನ, ಕವಿ ಶಶಿಕಲಾ ಕುರಗೋಡ್, ಕನಕ ಆರೋಗ್ಯ ಮತ್ತು ಶಿಕ್ಷಣ ಗ್ರಾಮೀಣಾಭಿವೃದ್ಧಿ ಸಂಸ್ಥೆ ಅಧ್ಯಕ್ಷ ಕನಕರಾಯ ಭಜಂತ್ರಿ , ಪತ್ರಕರ್ತ ಈರಯ್ಯ ಕುರ್ತಕೋಟಿ, ಚುಟುಕು ಕವಿ ರವಿಕುಮಾರ ಹಿರೇಮನಿ ಅಥಿತಿಗಳಾಗಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮಗಳು ವೈವಿಧ್ಯ ಸಮಾರಂಭದಲ್ಲಿ ಯರೇಹಂಚಿನಾಳ ಗ್ರಾಮದ ದಂಡೆಮ್ಮ ಮಂಡಲಗೇರಿ, ಶ್ರೀಮತಿ ಹನುಮವ್ವ ಯರೆಹಂಚಿನಾಳ, ಕವಿತಾ ಚೋಳಿನ ಸಾ. ಮಂಡಲಗಿರಿ ಹಾಗೂ ಸಂಗಡಿಗ-ರಿಂದ ಸೋಬಾನೆ ಜನಪದ ಗೀತೆಗಳು, ಬೆದವಟ್ಟಿಯ ವೀರಭದ್ರಪ್ಪ ಸುಂಕದ ಹಾಗೂ ಕುಕನೂರಿನ ಮುರಾರಿ ಭಜಂತ್ರಿ, ಶ್ರೀಶೈಲಪ್ಪ ಗೊಂಡಬಾಳ, ಶಂಕರಗೌಡ ವಣಗೇರಿ ಸಂಗಡಿಗ-ರಿಂದ ಸುಗಮಸಂಗೀತ, ಶ್ರೀ ಪಂಚಾಕ್ಷರಿ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳು ಭಕ್ತಿ ಗೀತೆಗಳು ಪ್ರಸ್ತುತ ಪಡಿಸಿದರು. ಬಸವರಾಜ್ ಕೊಡ್ಲಿ ಸ್ವಾಗತಿಸಿದರು, ಟ್ರಸ್ಟ್ ಅಧ್ಯಕ್ಷ ರುದ್ರಪ್ಪ ಭಂಡಾರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕವಿ ವಸಂತ ಗುಡಿ ನಿರೂಪಿಸಿದರು. ನಂತರ ಕಲಾವಿದರಿಗೆ ಸನ್ಮಾನಿಸಿ ಗೌರವಿಸಲಾಯಿತು.

## ವೀರಶೈವ-ಲಿಂಗಾಯತ ಮಹಾಸಭಾ :ಸಿಎಂ ಡಿಕೆಶಿ ಸಂಪುಟದಲ್ಲಿ ಹೆಚ್ಚಿನ ಆದ್ಯತೆ ನೀಡಲು ಒತ್ತಾಯ.

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ರಾಜ್ಯ ರಾಜಕೀಯದಲ್ಲಿ ವೀರಶೈವ-ಲಿಂಗಾಯತ ಸಮುದಾಯದ ಪ್ರಾತಿನಿಧ್ಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಸಚಿವ ಸಂಪುಟದ ವಿಸ್ತರಣೆಯ ಸಮಯದಲ್ಲಿ ಸಮುದಾಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕೊಪ್ಪಳ ತಾಲೂಕು ವೀರಶೈವ-ಲಿಂಗಾಯತ ಮಹಾಸಭಾದ ಅಧ್ಯಕ್ಷ ನಾಗಭೂಷಣ್ ಸಾಲಿಮಠ ಅವರು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಅನ್ನು ಒತ್ತಾಯಿಸಿದ್ದಾರೆ.**



ಈ ಕುರಿತು ಪ್ರಕಟಣೆ ನೀಡಿ ರಾಜ್ಯದ ಅಭಿವೃದ್ಧಿ ಮತ್ತು ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ವೀರಶೈವ-ಲಿಂಗಾಯತ ಸಮುದಾಯದ ಕೊಡುಗೆ ಮಹತ್ವದ್ದಾಗಿದೆ. ಆದ್ದರಿಂದ ಸಚಿವ ಸಂಪುಟದ ವಿಸ್ತರಣೆಯ ಸಮಯದಲ್ಲಿ ಸಮುದಾಯಕ್ಕೆ ಜನಸಂಖ್ಯೆ ಮತ್ತು ರಾಜಕೀಯ ಕೊಡುಗೆಗೆ ಅನುಗುಣವಾಗಿ ಸೂಕ್ತ ಸ್ಥಾನಮಾನ ಹೆಚ್ಚು ಆದ್ಯತೆ ನೀಡಬೇಕು, ರಾಜ್ಯದ ವಿವಿಧ ಭಾಗಗಳಲ್ಲಿ ವೀರಶೈವ-ಲಿಂಗಾಯತ ಸಮುದಾಯ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದ್ದು, ಪಕ್ಷದ ಬಲವರ್ಧನೆಗೆ ಪ್ರಮುಖ ಪಾತ್ರ ವಹಿಸಿದೆ. ಈ ಹಿನ್ನೆಲೆ ಸಮುದಾಯದ ಆಶೋತ್ತರಗಳನ್ನು ಪರಿಗಣಿಸಿ ಸಚಿವ ಸಂಪುಟದಲ್ಲಿ ಹೆಚ್ಚಿನ ಪ್ರಾತಿನಿಧ್ಯ ಕಲ್ಪಿಸುವ ಅಗತ್ಯವಿದೆ,ಸಾಮಾಜಿಕ ನ್ಯಾಯ ಮತ್ತು ಸಮಾನ ಅವಕಾಶಗಳ ತತ್ವದಡಿ ಎಲ್ಲ ಸಮುದಾಯಗಳಿಗೂ ಸಮರ್ಪಕ ಪ್ರಾತಿನಿಧ್ಯ ಸಿಗಬೇಕು. ಅದರೊಂದಿಗೆ ವೀರಶೈವ-ಲಿಂಗಾಯತ ಸಮುದಾಯಕ್ಕೂ ನ್ಯಾಯಯುತ ಸ್ಥಾನಮಾನ ದೊರಕಬೇಕು ಎಂದು ನಾಗಭೂಷಣ್ ಸಾಲಿಮಠ ಒತ್ತಾಯಿಸಿದ್ದಾರೆ.

## ಕೆಇಬಿ ಅಧಿಕಾರಿಗಳೇ ಎಚ್ಚೆತ್ತುಕೊಳ್ಳಿ! ಅವಘಡಕ್ಕೆ ಕಾದು ಕುಳಿತ ವಿದ್ಯುತ್ ಸ್ಥಂಭ

ಅ.ಶ. ಸುದ್ದಿ ಗಂಗಾವತಿ

**ಕಾರಟಗಿ: ತಾಲೂಕಿನ ಬೇವಿನಹಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಬಸವಣ್ಣ ಕ್ಯಾಂಪ್ ನ ಬಂತು ಬಸವಣ್ಣ ಅವರ ಮನೆ ಮುಂದೆ ಮುಖ್ಯ ರಸ್ತೆ ಬದಿಯಲ್ಲಿ ಶಿಥಿಲಗೊಂಡು ಅವಘಡಕ್ಕೆ ಕಾದು ಕುಳಿತಿ-ದೆ, ಮುಖ್ಯ ರಸ್ತೆಯ ಪಕ್ಕದಲ್ಲಿರುವುದರಿಂದ ನಿತ್ಯ ವಾಹನ ಸಂಚಾರ ದಟ್ಟನೆಯಿಂದ ಕೂಡಿದ್ದು ಯಾವುದೇ ಸಂದರ್ಭದಲ್ಲಿ ಸ್ತಂಭ ಬೀಳುವ ಸಂಭವವಿದ್ದು ವಾಹನ ಸವಾರರು ಭೀತಿಯನ್ನು ಎದುರಿಸುತ್ತಿದ್ದಾರೆ.**



ಗ್ರಾಮದಲ್ಲಿ 20 ವರ್ಷಗಳ ಹಳೆಯ ವಿದ್ಯುತ್ ಸ್ಥಂಭ ಇದಾಗಿದ್ದು, ಗಾಳಿ ಮಳೆಗೆ ವಿದ್ಯುತ್ ಸ್ಥಂಭ ಬೀಳುವ ಸಾಧ್ಯತೆ ಇದ್ದು ಸಾರ್ವಜನಿಕರುವ ಆತಂಕ ಗೊಂಡಿದ್ದಾರೆ.ಕೂಡಲೇ ಕೆಇಬಿ ಅಧಿಕಾರಿಗಳು ಇದನ್ನು ತೆರವುಗೊಳಿಸಿ ನೂತನ ವಿದ್ಯುತ್ ಸ್ಥಂಭ ಅಳವಡಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಸುಂದರ ಲಾಲ್ ಬಹುಗುಣ ಇಕೋ ಕ್ಲಬ್ ಹಾಗೂ ಶಾಲಾ ಶಿಕ್ಷಣ ಇಲಾಖೆ ನೇತೃತ್ವದಲ್ಲಿ ಪರಿಸರ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ತಾಲೂಕಿನ ಢಣಾಪೂರ ಸರಕಾರಿ ಪ್ರೌಢ ಶಾಲೆ ಆವರಣದಲ್ಲಿ ಲಾಲ್ ಬಹುಗುಣ ಇಕೋ ಕ್ಲಬ್ ಹಾಗೂ ಶಿಕ್ಷಣ ಇಲಾಖೆ ನೇತೃತ್ವದಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.**

ಈ ವೇಳೆ ಸಸಿಯನ್ನು ನೆಡುವ ಮೂಲಕ ಸಸಿಗೆ ಮುಖ್ಯ ಶಿಕ್ಷಕ ಹನುಮಂತಪ್ಪ ಚವ್ಹಾಣ ಮಾತನಾಡಿ ಗಿಡಮರಗಳನ್ನು ಹೆಚ್ಚು ಬೆಳೆಸುವುದ-ರಿಂದ ಶುದ್ದವಾತವರಣ ಹಾಗೂ ಶುದ್ಧ ಗಾಳಿ ಪಡೆಯಬಹುದು ಉತ್ತಮ ಪರಿಸರ ನಿರ್ಮಾಣ-ಕ್ಕಾಗಿ ಗಿಡಮರಗಳನ್ನ ನೆಡೋಣ ಎಂದರು. ನಂತರ ಹನುಮೇಶ ಮಾತನಾಡಿ ಪ್ರಕೃತಿ ನಮಗೆ




ಸಾಕಷ್ಟು ವರದಾನ ನೀಡಿದೆ ಆದರೆ ಪ್ರಕೃತಿಗೆ ನಾವು ಏನಾದರೂ ನೀಡಬೇಕು ಅದಕ್ಕಾಗಿ ನಮಗೆ ಸಮಯ ಸಿಕ್ಕಾಗ ಎಲ್ಲರು ಸಸಿಗಳನ್ನು ನೆಡುವ ಮೂಲಕ ಪರಿಸರ ಉಳಿಸೋಣ ಹಾಗೆ ಪ್ರತಿಯೊಬ್ಬರು ತಮ್ಮ ಶುಭ ಸಮಾರಂಭದಲ್ಲಿ ಗಿಡಗಳನ್ನು ಉಡುಗೊರೆಯಾಗಿ ನೀಡಬೇಕು ಅಂದಾಗ ಪರಿಸರ ಜಾಗೃತಿ ಮೂಡಲು ಸಹಕಾರಿಯಾಗುತ್ತದೆ ಎಂದರು. ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಂದ ನಾಲ್ಕು ಸಸಿಗಳನ್ನು ನೆಡುವ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಈ ವೇಳಾ ಢಣಾಪೂರ ಸರಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರಾದ ಹನುಮಂತಪ್ಪ ಚವ್ಹಾಣ ಶಾಲಾ ಶಿಕ್ಷಕರಾದ ಚಂದ್ರಶೇಖರ ಜಾಪಳ ,ಕೋಟೆಪ್ಪ ಜಿ, ಸಿದ್ದಲಿಂಗೇಶ್ವರ, ಅಯ್ಯನಗೌಡ , ಚನ್ನಬಸಪ್ಪ , ಸೈಯ್ಯದ್ ಸನವುಲ್ಲಾ ಖಾನ , ಮಾಲತೇಶ, ಸುಮಲತಾ , ಗಂಗಮ್ಮ , ಗ್ರಾಮದ ಹಸಿರು ಬಳಗ ಸದಸ್ಯರಾದ ರಾಘವೇಂದ್ರ, ನಿಂಗರಾಜ ಪಂಪಾ,ಗೂಡಪಾಷ,ಬಸವರಾಜ,ಮಂಜು ಸೇರಿದಂತೆ ಶಿಕ್ಷಕಿಯರು ,ಶಾಲಾ ಮಕ್ಕಳು ಭಾಗಿಯಾಗಿದ್ದರು.

## ಮಹಾತ್ಮಗಾಂಧಿ ನರೇಗಾ ಯೋಜನೆ ಗ್ರಾಮೀಣ ಪ್ರದೇಶದ ಕೂಲಿಕಾರರಿಗೆ ಒಂದು ವರದಾನ-ಐ.ಇ.ಸಿ ಸಂಯೋಜಕ ಲಕ್ಷ್ಮಣ ಕೆರಳ್ಳಿ



ಅ.ಶ. ಸುದ್ದಿ ಕುಕನೂರು

**ಕುಕನೂರ: ತಾಲೂಕಿನ ಮಸಬಹಂಚಿನಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ನಿಟ್ಟಾಲಿ ಗ್ರಾಮದಲ್ಲಿ ಜೂನ್ 6 ಶನಿವಾರದಂದು ಮಹಾತ್ಮಗಾಂಧಿ ನರೇಗಾ ಯೋಜನೆಯ ನಾಲಾ ಸುಧಾರಣೆ ಕಾಮಗಾರಿ ಸ್ಥಳದಲ್ಲಿ ರೋಜಗಾರ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯ ಸಂಯೋಜಕ ಲಕ್ಷ್ಮಣ ಕೆರಳ್ಳಿ ಮಾತನಾಡಿ ನರೇಗಾ ಯೋಜನೆ ಗ್ರಾಮೀಣ ಪ್ರದೇಶದಲ್ಲಿನ ಕೂಲಿಕಾರರು ಬೇರೆ ಊರುಗಳಿಗೆ ವಲಸೆ ಹೋಗದೆ ತಮ್ಮ ಗ್ರಾಮದಲ್ಲಿಯೋ ಉದ್ಯೋಗದ ನೆಲೆಯನ್ನು ಕಂಡುಕೊಳ್ಳಲು ಸಹಕಾರಿಯಾಗಿದೆ, ಇದ-ರಿಂದಾಗಿ ಕೂಲಿಕಾರರು ತಮ್ಮ ಗ್ರಾಮದಲ್ಲಿಯೇ ಇದ್ದು ತಮ್ಮ ಮಕ್ಕಳ ಹಾಗೂ ತಂದೆ ತಾಯಿಗಳ ಆರೈಕೆ ಮಾಡುವುದರೊಂದಿಗೆ ನೆಮ್ಮದಿಯ ಜೀವನ ನಡೆಸಬಹುದು. ಅಲ್ಲದೆ ನರೇಗಾ ಕೂಲಿಕಾರರಿಗೆ ನಿಗದಿತ ಕೆಲಸಕ್ಕೆ ರೂ 370 ನೀಡುವುದರಿಂದ ಒಂದು ಮನೆಯಿಂದ ಇಬ್ಬರು ಕೆಲಸ ಮಾಡಿದರೆ ರೂ 740 ದುಡಿಯಬಹುದು.

ಇದರ ಹಣವನ್ನು ಮಕ್ಕಳ ವಿದ್ಯಾಭ್ಯಾಸ ಕ್ಕೆ ಬಿತ್ತನೆಗೆ ಉಪಯೋಗ ವಾಗುತ್ತಿದೆ ಎಂದರು. ಮತ್ತು ನರೇಗಾ ಯೋಜನೆಯ ಕೂಲಿಕಾರರು ಕಿಒಖಃಜ, ಕಿಒಎಃಜ, ಂಕಜ ಗಳಂತಹ ಇನ್ಸುರನ್ಸ ಹಾಗೂ ಪೆನ್ಷನ್ ಯೋಜನೆಗಳಲ್ಲಿ ಫಲಾನುಭವಿಗಳು ಆಗುವುದರಿಂದ ಆಪತ್ಕಾಲದಲ್ಲಿ ಅಪಘಾತ ಮತ್ತು ಅವಲಂಬಿತ ಕುಟುಂಬಸ್ಥ-ರಿಗೆ ಇನ್ಸೂರೆನ್ಸ ಹಣ ನೆರವಾಗುತ್ತದೆ ಎಂದರು. ಸ್ಥಳದಲ್ಲಿ ತಾಂತ್ರಿಕ ಸಹಾಯಕ ಚೇತನ ಹಳ್ಳಿ, ಗ್ರಾಮ ಕೂಲಿ ಸಹಾಯಕ ಗೀತಾ ಇಳಿಗೇರ, ಕಾಯಕ ಬಂಧುಗಳು ಕೂಲಿಕಾರರು ಹಾಜರಿದ್ದರು.

## ಕ್ಷಿಪ್ರ ಕಾರ್ಯಾಚರಣೆ, ಕಳ್ಳತನವಾದ 6 ಘಂಟೆಗಳಲ್ಲಿ ಆರೋಪಿತರ ಬಂಧನ.

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಉಪ ವಿಭಾಗ ಕುಷ್ಟಗಿ ಪಟ್ಟಣದ ಅಪ್ರಾಪ್ತ ಬಾಲಕನಿಗೆ ಆರೋಪಿತರು ಸಿಗರೇಟ ಸೇದುವ ಕೆಟ್ಟ ಅಭ್ಯಾಸ ಬೆಳಿಸಿ ಮನೆಯಿಂದ ಬಂಗಾರದ ಒಡವೆಗಳನ್ನು ಬಲವಂತವಾಗಿ ತ-ರಿಸಿಕೊಂಡು ಬಗ್ಗೆ ಕುಷ್ಟಗಿ ಠಾಣೆಯಲ್ಲಿ ದಾಖಲಾದ ಪ್ರಕರಣ ಸಂ:124/2026 ಕಲಂ: 308(2), 351(2) ಸಹಿತ 3(5) ಬಿ.ಎನ್.ಎಸ್ ನೇದ್ದರ ಪ್ರಕರಣ ಹಾಗೂ ಇತರೆ ಕಳ್ಳತನದ ಪ್ರಕರಣಗಳಾದ.**

15/2026 ಮತ್ತು 19/2026 ನೇದ್ದರ ಪ್ರಕರಣಗಳಲ್ಲಿಯ ಆರೋಪಿತರ ಪತ್ತೆ ಕು-ರಿತು ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು ಕೊಪ್ಪಳ ಡಾ.ರಾಮ ಎಲ್, ಅರಸಿದ್ದಿ ಐ.ಪಿ. ಎಸ್ ಹಾಗೂ ಮಾನ್ಯ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಹೇಮಂತ ಕುಮಾರ ಐಪಿಎಸ್ ಹಾಗೂ ಜೆ.ಎಸ್ ನ್ಯಾಮಗೌಡರ್, ಡಿ.ಎಸ್.ಪಿ ಗಂಗಾವತಿ ರವರ ಮಾರ್ಗದರ್ಶನದಲ್ಲಿ, ವಿಶ್ವನಾಥ ಹಿರೇಗೌಡರ ಸಿ.ಪಿ.ಐ ಕುಷ್ಟಗಿ ವೃತ್ತ



ರವರ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು. ಪಿ.ಎಸ್.ಐ ಹನಮಂತಪ್ಪ ತಳವಾರ, ಕುಷ್ಟಗಿ ಪಿ.ಎಸ್.ಐ ಪುಂಡಪ್ಪ ಹಾಗೂ ಸಿಬ್ಬಂದಿಯವರಾದ ಶ್ರೀಧರ ಹೆಚ್.ಸಿ. 48, ಅಮರೇಶ ಹೆಚ್.ಸಿ. 168, ಪರಶುರಾಮ ಪಿ.ಸಿ. 388, ಹನಮಂತ ಪಿ.ಸಿ. 612, ಮಂಜುನಾಥ ಪಿ.ಸಿ. 91, ಪ್ರಶಾಂತ ಪಿ.ಸಿ. 161, ಶಿವರಾಜ ಪಿ.ಸಿ. 458, ಕುಷ್ಟಗಿ ಪೊಲೀಸ್ ಠಾಣೆ ಹಾಗೂ ಕೊಪ್ಪಳ ಜಿಲ್ಲಾ ಸಿಡಿಆರ್ ವಿಭಾಗದ ಪ್ರಸಾದ್ ಹಾಗೂ ಮಂಜುನಾಥ ಪೊಲೀಸ್ ಸಿಬ್ಬಂದಿಯವರನ್ನೊಳಗೊಂಡ ಒಂದು ತಂಡ ರಚನೆ ಮಾಡಿ ಕ್ಷಿಪ್ರಗತಿಯಲ್ಲಿ ಕಾರ್ಯಾಚರಣೆ.

ಕೈಗೊಂಡು ತನಿಖೆಯಲ್ಲಿ ವೈಜ್ಞಾನಿಕ ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರಕರಣ ದಾಖಲಾದ 6 ಗಂಟೆ ಅವದಿಯೊಳಗೆ ಆರೋಪಿತರಾದ ನವೀನ ಕಲಾಲ್ ಸಾ. ತೆಗ್ಗಿನ ಓಣಿ ಕುಷ್ಟಗಿ, ಬಸವರಾಜ ಅಂಗಡಿ ಸಾ. ತೆಗ್ಗಿನ ಓಣಿ ಕುಷ್ಟಗಿ ರಾಜಮಹ್ಮದ, ಬಸವರಾಜ ರವ-ರಿಗೆ ದಸ್ತಗಿರಿ ಮಾಡಿ ಆರೋಪಿತರಿಂದ ಒಟ್ಟು 150 ಗ್ರಾಂ ತೂಕದ ಬಂಗಾರದ ಆಭರಣ ಹಾಗೂ 180 ಗ್ರಾಂ ಬೆಳ್ಳಿಯ ಆಭರಣ ಒಟ್ಟು ಅಂ.ಕಿ.22,00,000/-ರೂ ಬೆಲೆಬಾಳುವುದನ್ನು ಜಪ್ತಿಪಡಿಸಿಕೊಂಡು ಆರೋಪಿತರಿಗೆ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದಾರೆ.

ತನಿಖಾ ತಂಡದ ಕಾರ್ಯವನ್ನು ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು ಕೊಪ್ಪಳ ರವರು ಪ್ರಶಂಶಿಸಿ ಬಹುಮಾನ ಘೋಶಿಸಿದ್ದಾರೆ. ಗಂಗಾವತಿ ಉಪವಿಭಾಗದಲ್ಲಿ ದಾಖಲಾದ 05 ಪ್ರಕರಣಗಳಲ್ಲಿ ಒಟ್ಟು 07 ಜನ ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದೂ, ಅಲ್ಲದೇ ಅವ-ರಿಂದ ಒಟ್ಟು 250 ಗ್ರಾಂ ಬಂಗಾರದ ಆಭರಣಗಳು ಹಾಗೂ 1630 ಗ್ರಾಂ ಬೆಳ್ಳಿಯ ಆಭರಣಗಳು ಒಟ್ಟು 41,00,000=00 ರೂ ಬೆಲೆಬಾಳುವುದನ್ನು ಜಪ್ತ ಪಡಿಸಿಕೊಳ್ಳಲಾಗಿದೆ.

# ಶಂಭುಲಿಂಗನಗೌಡ ಪಾಟೀಲ್ ಹಲಗೇರಿ ಸಂಘಟನಾ ಚತುರ : ಸಂಗಣ್ಣ ಕರಡಿ,,

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಶಂಭುಲಿಂಗನಗೌಡ ಪಾಟೀಲ್ ಅವರು ಕಠಿಣ ಪರಿಶ್ರಮದಿಂದ ಬೆಳೆದ ಸಂಘಟನಾ ಚತುರ ಎಂದು ಮಾಜಿ ಸಂಸದ ಸಂಗಣ್ಣ ಕರಡಿ ಹೇಳಿದರು. ಅವರು ನಗರದ ಮಧುಶ್ರೀ ಗಾರ್ಡನ್‌ನಲ್ಲಿ 38 ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ರಾಜ್ಯಾಧ್ಯಕ್ಷ ಹಾಗೂ ಶಿಕ್ಷಕರ ಮುಖಂಡ ಶಂಭುಲಿಂಗನಗೌಡ ಪಾಟೀಲ್ ಹಲಗೇರಿ ಅವರ ವಯೋನಿವೃತ್ತಿ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿ ಶಿಕ್ಷಕರ ಸಂಘಟನೆಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ ಎಂದು ಹೇಳಿದರು.**

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಜ್ಯ ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಸಿ ಎಸ್ ಷಡಾಕ್ಷರಿ ಅಧಿಕಾರ, ಹುದ್ದೆ ಹಾಗೂ ಅಂತಸ್ತು ಶಾಶ್ವತವಲ್ಲ. ಸಮಾಜದ ವಿಶ್ವಾಸ ಗಳಿಸಿ ಜನಪರ ಕೆಲಸ ಮಾಡಿದರೆ ಮಾತ್ರ ಜನರ ಮನಸ್ಸಿನಲ್ಲಿ ಶಾಶ್ವತ ಸ್ಥಾನ ಪಡೆಯಲು ಸಾಧ್ಯ ಎಂದು ಹೇಳಿದರು. ಅಭಿನಂದನೆ ಸ್ವೀಕರಿಸಿ ಮಾತನಾಡಿದ



ಶಂಭುಲಿಂಗನಗೌಡ ಪಾಟೀಲ್ ಹಲಗೇರಿ, ಶಿಕ್ಷಕರಲ್ಲಿ ಗುಂಪುಗಾರಿಕೆ, ಭಿನ್ನಾಭಿಪ್ರಾಯ ಹಾಗೂ ಜಗಳಗಳಿಗೆ ಅವಕಾಶ ನೀಡಬಾರದು. ಯಾವುದೇ ಸಮಸ್ಯೆ ಬಂದರೂ ಶಿಕ್ಷಕರು ಪರಸ್ಪರ ಚರ್ಚಿಸಿ ಪರಿಹರಿಸಿಕೊಳ್ಳಬೇಕು. ಜಾತಿ, ಧರ್ಮ ಹಾಗೂ ಪಕ್ಷಭೇದಗಳನ್ನು ಬದಿಗಿಟ್ಟು ನೌಕರರಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿದಾಗ ಮಾತ್ರ ಸಮಾಜದಲ್ಲಿ ಗೌರವ ದೊರೆಯುತ್ತದೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್ ಮಾತನಾಡಿ, ತಮ್ಮ ವೃತ್ತಿ ಹಾಗೂ ಕುಟುಂಬಕ್ಕೆ ಮಾತ್ರ ಸೀಮಿತರಾಗುತ್ತಾರೆ. ಆದರೆ ಶಂಭುಲಿಂಗನಗೌಡ ಅವರು ವೃತ್ತಿಯ ಜೊತೆಗೆ ಸಂಘಟನಾ ಕ್ಷೇತ್ರದಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡು ಜನರ ಮೆಚ್ಚುಗೆ ಪಡೆದಿದ್ದಾರೆ ಎಂದರು. ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ. ಚಂದ್ರಶೇಖರ್ ಮಾತನಾಡಿ,ಶಂಭುಲಿಂಗನಗೌಡ ಅವರು ಬಹುಮುಖ ವ್ಯಕ್ತಿತ್ವದವರಾಗಿದ್ದಾರೆ. ಎಂದು ಹೇಳಿದರು. ಮಾಜಿ ಶಾಸಕ ಪರಣ್ಣ ಮುನವಳ್ಳಿ ಮಾತನಾಡಿ, 38 ವರ್ಷಗಳ ಕಾಲ ಶಿಕ್ಷಣ ಎಂಬ ಪವಿತ್ರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಶಂಭುಲಿಂಗನಗೌಡ ಅವರ ಕಾರ್ಯ ಶ್ಲಾಘನೀಯ.

ನಿವೃತ್ತಿ ಬಳಿಕವೂ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಸಂಘಟನೆ ಮತ್ತು ಹೋರಾಟ ಜೀವನದ ಅವಿಭಾಜ್ಯ ಅಂಗಗಳಾಗಿದ್ದು, ಸಮಾಜದ ಒಳಿತಿಗಾಗಿ ನಿರಂತರವಾಗಿ ಕಾರ್ಯನಿರ್ವಹಿಸಬೇಕು ಹೇಳಿದರು. ಕಾರ್ಯಕ್ರಮದಲ್ಲಿ ಡಾ. ಬಸವರಾಜ ಕ್ಯಾವಟರ್ ಮಾತನಾಡಿದರು. ಬಿಸರಳ್ಳಿಯ ಶಿವಶಾಂತ ವೀರ ಮಹಾಸ್ವಾಮಿಗಳು, ಅಳವಂಡಿಯ ಶ್ರೀ ಮರಳಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಮೈನಳ್ಳಿ-ಬಿಕನಳ್ಳಿ ಉಜ್ಜಯಿನಿ ಶಾಖಾ ಮಠದ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು.

ಈ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಸುರೇಶ ಭೂಮರೆಡ್ಡಿ, ಡಾ. ಬಸವರಾಜ ಕ್ಯಾವಟರ್, ಉದ್ಯಮಿ ಬಸವರಾಜ ಪುರದ, ಶಿವಾನಂದ ನಾಯಕ್, ಹನುಮರಡ್ಡಿ.

ಹಂಗನಕಟ್ಟಿ, ನೌಕರರ ಸಂಘದ ಗೌರವಾಧ್ಯಕ್ಷ ಮಲ್ಲಿಕಾರ್ಜುನ ಬಳ್ಳಾರಿ, ರಾಜ್ಯ ಉಪಾಧ್ಯಕ್ಷ ನಾಗರಾಜ ಜುಮ್ಮಣ್ಣನವರ್, ರುದ್ರಣ್ಣ, ಮಲ್ಲಿಕಾರ್ಜುನ ಗೌಡ, ಬಸವರಾಜ್ ಭೋವಿ, ವೆಂಕನಗೌಡ ಹಿರೇಗೌಡರ, ಬೀರಪ್ಪ ಅಂಡಗಿ, ರವಿ ಉತ್ತಂಗಿ, ರಮೇಶ ವೈದ್ಯ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಶಂಭುಲಿಂಗನಗೌಡ ಪಾಟೀಲ್ ಹಲಗೇರಿ ಅವರನ್ನು ಶಾಲು, ಹಾರ, ಫಲಕ ಹಾಗೂ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ಸಂಘಟನೆಗಳ ಪದಾಧಿಕಾರಿಗಳು, ಶಿಕ್ಷಕರು, ಸಾರ್ವಜನಿಕರು, ಅಭಿಮಾನಿಗಳು ಶುಭ ಹಾರೈಸಿದರು.

# ನನ್ನ ಕಸ, ನನ್ನ ಜವಾಬ್ದಾರಿ' ಜಾಗೃತಿ ಕಾರ್ಯಕ್ರಮ.

ಅ.ಶ. ಸುದ್ದಿ ಕುಕನೂರು

**ಕುಕನೂರು: ಪಟ್ಟಣ ಪಂಚಾಯತಿ ಕುಕನೂರು ಇವರ ವತಿಯಿಂದ ಪಟ್ಟಣದ ಅನ್ನದಾನೀಶ್ವರ ಮಠದ ಮುಂಬಾಗಲ್ಲಿ ಸೋಮವಾರ 'ಘನತ್ಯಾಜ್ಯಗಳ ನಮೂನೆ ಮತ್ತು ಅವುಗಳ ವಿಂಗಡನೆ' ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮದಲ್ಲಿ ಅನ್ನದಾನೀಶ್ವರ ಮಠದ ಮಹಾದೇವ ಸ್ವಾಮೀಜಿ ಮಾತನಾಡಿ, "ಸ್ವಚ್ಛತೆಯೇ ದೇವರ ಸೇವೆ. ನಮ್ಮ ಮನೆಯ ಕಸವನ್ನು ನಾವೇ ವಿಂಗಡಿಸಿ ಕೊಡುವುದು ಪ್ರತಿ ನಾಗರಿಕನ ಆದ್ಯ ಕರ್ತವ್ಯ. ಹಸಿ ಕಸ, ಒಣ ಕಸ, ಸಾನಿಟರಿ ಮತ್ತು ಅಪಾಯಕಾರಿ ತ್ಯಾಜ್ಯವನ್ನು ಮನೆಯಲ್ಲೇ 4 ವಿಧವಾಗಿ ವಿಂಗಡಿಸಿ ಪೌರಕಾರ್ಮಿಕರಿಗೆ ನೀಡಬೇಕು. ಇದರಿಂದ ಪರಿಸರ ಉಳಿಯುತ್ತದೆ, ರೋಗ ರುಜಿನಗಳು ಕಡಿಮೆಯಾಗುತ್ತವೆ" ಎಂದು ಕರೆ ನೀಡಿದರು. ಪಟ್ಟಣ ಪಂಚಾಯತಿ ಬಸವರಾಜ ಆರಬೆರಳಿನ ಅವರು ಮಾತನಾಡಿ, ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆದರೆ ಹಾಗೂ ವಿಂಗಡಿಸದೆ ತ್ಯಾಜ್ಯ ನೀಡಿದರೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದರು.



ಕಾರ್ಯಕ್ರಮದಲ್ಲಿ ಕಸ ವಿಂಗಡಣೆಯ 4 ವಿಧಗಳು – ಹಸಿ ಕಸ, ಒಣ ಕಸ, ಸಾನಿಟರಿ ತ್ಯಾಜ್ಯ ಮತ್ತು ಅಪಾಯಕಾರಿ ತ್ಯಾಜ್ಯಗಳ ಬಗ್ಗೆ ಮಾಹಿತಿ ಇರುವ ಕರಪತ್ರಗಳನ್ನು ಸಾರ್ವಜನಿಕರಿಗೆ ಹಂಚಲಾಯಿತು.

ಈ ಸಂದರ್ಭದಲ್ಲಿ ಈರಮ್ಮ ಗಾಟಿ, ಚಂದ್ರಕಲಾ ಹಾಲಕೆರೆ, ಶಿಲ್ಪ ಭಜಂತ್ರಿ, ಹುಸೇನ್ ಬಿ, ನಾಗಮ್ಮಮಳಿಗಿ, ಸಂಗಮೇಶ ಕಲ್ಮಠ, ಸಂಗಪ್ಪ ಗುತ್ತಿ, ಶಿವು ಯತ್ನಟ್ಟಿ ಸೇರಿದಂತೆ ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯತಿ ಸಿಬ್ಬಂದಿ ವರ್ಗ, ಆಶಾ ಕಾರ್ಯಕರ್ತೆಯರು, ಸ್ವಸಹಾಯ ಸಂಘದ ಮಹಿಳೆಯರು ಹಾಗೂ ನೂರಾರು ಸಾರ್ವಜನಿಕರು ಭಾಗವಹಿಸಿದ್ದರು.

## ಪೊಲೀಸ್ ಇಲಾಖೆಯಿಂದ 3,395 ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ: ಗೃಹ ಸಚಿವ ಪ್ರಿಯಾಂಕ್ ಖರ್ಗೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು/ಕಲಬುರಗಿ: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಮಿಕ್ಕುಳಿದ (ಉಳಿದ ಮೂಲ) ವೃಂದದಲ್ಲಿನ ವಿವಿಧ ಜಿಲ್ಲಾ, ನಗರ ಹಾಗೂ ಘಟಕಗಳಲ್ಲಿ ಖಾಲಿ ಇರುವ ಒಟ್ಟು 3,395 ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ರಾಜ್ಯದ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಇ-ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.**



ಈ ನೇಮಕಾತಿಯ ಪ್ರಮುಖ ಪ್ರಕ್ರಿಯೆಯಾದ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ನಡೆಸಲಿದ್ದು, ಆಫ್‌ಲೈನ್–ಒಎಂಆರ್ (Offline-OMR) ಮಾದರಿಯಲ್ಲಿ ಪರೀಕ್ಷೆಗಳು ಜರುಗಲಿವೆ ಎಂದಿದ್ದಾರೆ.

ಒಟ್ಟು 3,395 ಹುದ್ದೆಗಳಲ್ಲಿ ಪುರುಷ ಅಭ್ಯರ್ಥಿಗಳಿಗೆ 2266, ಮಹಿಳಾ ಅಭ್ಯರ್ಥಿಗಳಿಗೆ 755, ಸೇವಾನಿರತ ಪುರುಷರಿಗೆ 257, ಸೇವಾನಿರತ ಮಹಿಳೆಯರಿಗೆ 82 ಹಾಗೂ ತೃತೀಯ ಲಿಂಗಿ ಅಭ್ಯರ್ಥಿಗಳಿಗೆ 35 ಹುದ್ದೆಗಳನ್ನು ಕಾಯ್ದಿರಿಸಲಾಗಿದೆ. ಆಯ್ಕೆಯಾಗುವ ಅಭ್ಯರ್ಥಿಗಳಿಗೆ ?37,500 ರಿಂದ ?76,100 ರವರೆಗಿನ ವೇತನ ಶ್ರೇಣಿ ಅನ್ವಯವಾಗಲಿದ್ದು, ರಾಷ್ಟ್ರೀಯ ಪಿಂಚಣಿ ಯೋಜನೆ (NPS) ಸೌಲಭ್ಯ ದೊರೆಯಲಿದೆ ಎಂಬ ವಿವರಗಳನ್ನು ಸಚಿವ ಪ್ರಿಯಾಂಕ್ ಖರ್ಗೆ ನಿಡಿದ್ದಾರೆ. ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಪಿ.ಯು.ಸಿ (PUC) ಅಥವಾ ಸಿ.ಬಿ.ಎಸ್.ಇ, ಐ.ಎಸ್.ಸಿ, ಎನ್.ಐ.ಓ.ಎಸ್ ಹಾಗೂ ಮೂರು ವರ್ಷಗಳ ಡಿಪ್ಲೊಮಾ ಸೇರಿದಂತೆ ಸರ್ಕಾರದ ನಿಯಮಾವಳಿಗಳನ್ವಯ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು. ಜನ್ಮ ದಿನಾಂಕದ ಆಧಾರದ ಮೇಲೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕಾಗಿದ್ದು, ಸರ್ಕಾರವು ಒಂದು ಬಾರಿಗೆ ಅನ್ವಯವಾಗುವಂತೆ ಗರಿಷ್ಠ ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆ ನೀಡಿದೆ. ಇದರನ್ವಯ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ 33 ವರ್ಷಗಳು, SC/ST ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 35 ವರ್ಷಗಳು ಹಾಗೂ ಬುಡಕಟ್ಟು ಅಭ್ಯರ್ಥಿಗಳಿಗೆ ಗರಿಷ್ಠ 38 ವರ್ಷಗಳ ವಯೋಮಿತಿಯನ್ನು ನಿಗದಿಪಡಿಸಲಾಗಿದೆ ಎಂದೂ ಸಚಿವರು ಹೇಳಿದ್ದಾರೆ. ಅರ್ಜಿ ಸಲ್ಲಿಕೆ ಪ್ರಕ್ರಿಯೆಯು ಜೂನ್ 08, 2026 ರಿಂದ ಅಧಿಕೃತವಾಗಿ ಪ್ರಾರಂಭವಾಗಲಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜುಲೈ 03, 2026 ಕೊನೆಯ ದಿನಾಂಕವಾಗಿರುತ್ತದೆ. ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕೃತ ವೆಬ್‌ಸೈಟ್ https://cetonline.karnataka.gov.in/kea/ ಲಿಂಕ್ ಮೂಲಕ ಮಾತ್ರವೇ ಅರ್ಜಿ ಸಲ್ಲಿಸಬೇಕಿದ್ದು, ಹೆಚ್ಚಿನ ಮಾಹಿತಿ ಹಾಗೂ ತಾಂತ್ರಿಕ ನೆರವಿಗಾಗಿ ಪ್ರಾಧಿಕಾರದ ಮಾಹಿತಿ ಕೇಂದ್ರದ ದೂರವಾಣಿ ಸಂಖ್ಯೆ: 080–23460460 ಅನ್ನು ಸಂಪರ್ಕಿಸಬಹುದು ಅಥವಾ ಅಧಿಕೃತ 'X' ಖಾತೆ @KEA_KARNATAKA ವೀಕ್ಷಿಸಬಹುದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ನೀಡಿದ್ದಾರೆ.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ನಗರದಾದ್ಯಂತ ತಗ್ಗು ಗುಂಡಿಗಳಿಂದ ಕೂಡಿದ ಭತ್ತದ ನಗರಿ,,,

## ಶಾಸಕರ ದಿವ್ಯ ನಿರ್ಲಕ್ಷ್ಯದಿಂದ ಅಭಿವೃದ್ಧಿ ಕಾಣದ ಬತ್ತದ ಕಣಜ,,



ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ನಗರಾದ್ಯಂತ ಯಾವುದೇ ರಸ್ತೆಗಳಲ್ಲಿ ಸಂಚರಿಸಬೇಕೆಂದರೇ ಜೀವವನ್ನು ಅಂಗೈಯಲ್ಲಿ ಹಿಡಿದುಕೊಂಡು ಓಡಾಡಬೇಕಾದ ಅನಿವಾರ್ಯತೆ ಇಲ್ಲಿನ ನಾಗರಿಕರದಾಗಿದೆ. ಹೌದು,, ಚುನಾವಣೆಗೂ ಮುನ್ನ ಶಾಸಕರು ನೀಡಿದ ಆಶ್ವಾಸನೆಗಳು ಕೇವಲ ಆಶ್ವಾಸನೆಗಳಾಗಿಯೇ ಉಳಿದಿದ್ದು, ಮೂರು ವರ್ಷಗಳಿಂದ ಕ್ಷೇತ್ರ ಅಭಿವೃದ್ಧಿಯಲ್ಲಿ ಶೂನ್ಯವಾಗಿದೆ ಎನ್ನುವುದು ಬುದ್ದಿ ಜೀವಿಗಳ ಮಾತಾಗಿದೆ.**

ಕೇವಲ ಚುನಾವಣೆಯ ವೇಳೆ ಕ್ಷೇತ್ರವನ್ನು ರಾಜ್ಯದಲ್ಲಿಯೇ ಅಭಿವೃದ್ಧಿ ಕ್ಷೇತ್ರವನ್ನಾಗಿ ಮಾಡುತ್ತೇನೆ ಎಂದು ಹೇಳಿ ಶಾಸಕರಾದ ಮೇಲೆ ಕ್ಷೇತ್ರದತ್ತ ತಿರುಗಿಯು ನೋಡದೇ, ಸಾರ್ವಜನಿಕರ ಕುಂದು ಕೊರತೆ ಕೇಳದೇ ಶಾಸಕರು ಕ್ಷೇತ್ರದ ಜನತೆಗೆ ಅನ್ಯಾಯವೆಸುಗುತ್ತಿದ್ದಾರೆ ಎಂದು ಸಾರ್ವಜನಿಕರು, ಆರೋಪಿಸುತ್ತಿದ್ದಾರೆ. ನಗರದ ಯಾವುದೇ ರಸ್ತೆಗಳಲ್ಲಿ ಸಂಚರಿಸಿದರು, ದೊಡ್ಡ ವಾಹನಗಳು ಹೋದರೆ ಸಾಕು ಅದರಿಂದ ಹಾರುವ ಧೂಳಿನಿಂದ ಅದೆಷ್ಟೋ ಅನಾಹುತಗಳಾಗಿ, ಜನರು ಕೈ, ಕಾಲು ಮುರಿದುಕೊಂಡ ಗಂಭೀರ ಆರೋಪಗಳು ಕೇಳಿಬಂದಿವೆ.

ನಗರದ ಮುಖ್ಯ ರಸ್ತೆಗಳೆಲ್ಲಾ ಕಡೆಗಳಲ್ಲಿ ರಸ್ತೆಗಳಲ್ಲಿ ಬೃಹದಾಕಾರದ ಗುಂಡಿಗಳು ಬಿದ್ದಿದ್ದು ವಾಹನ ಸವಾರರು ಐದು ನಿಮಿಷದ ದಾರಿಗೆ ಅರ್ಧಗಂಟೆ ಪ್ರಯಾಣಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಮಳೆ ಬಂದರೆ ಸಾಕು ರಸ್ತೆಗಳಲ್ಲಿನ ಗುಂಡಿಗಳಲ್ಲಿ ನೀರು ತುಂಬಿಕೊಂಡು ರಾತ್ರಿ ಸಮಯದಲ್ಲಿ ರಸ್ತೆಯಲ್ಲಿ ಸಂಚರಿಸುವ ದ್ವಿಚಕ್ರ ವಾಹನ ಸವಾರರು ಅದರಲ್ಲಿ ಬಿದ್ದು ಹಲವಾರು ರೀತಿಯ ಅಪಘಾತಗಳು ಸಂಭವಿಸಿದ ಉದಾಹರಣೆಗಳಿವೆ. ಇದು ಕೇವಲ ನಗರ ಮಾತ್ರವಲ್ಲದೇ ಕ್ಷೇತ್ರದ ಯಾವುದೇ ರಸ್ತೆಗಳಲ್ಲಿ ಸಂಚರಿಸಬೇಕೆಂದರೇ ವಾಹನ ಸವಾರರು ತಮ್ಮ ಜೀವವನ್ನು ಪಣಕ್ಕಿಟ್ಟು ಓಡಾಡಬೇಕಾಗಿದ್ದು, ಶಾಸಕರು ಕೂಡಲೇ ನಗರದ ಹಾಗೂ ಗ್ರಾಮೀಣ ಪ್ರದೇಶಗಳ ರಸ್ತೆಗಳ ಸುಧಾರಣೆ ಮಾಡಬೇಕು ಎನ್ನುವುದು ಸಾರ್ವಜನಿಕರ ಆಗ್ರಹವಾಗಿದೆ.

## ಶಾಸಕ ಲಕ್ಷ್ಮಣ್ ಸವದಿಗೆ ಸಚಿವ ಸ್ಥಾನ ನೀಡಲು ಆಗ್ರಹ :ರುದ್ರಮುನಿ ಗಾಳಿ,,

ಅ.ಶ. ಸುದ್ದಿ ಕಪ್ಪಳ

**ಕೊಪ್ಪಳ: ರಾಜ್ಯದ ನೂತನ ಮುಖ್ಯಮಂತ್ರಿ ಡಿಕೆಶಿ ಸಚಿವ ಸಂಪುಟದಲ್ಲಿ ಅಥಣಿ ಶಾಸಕ ಲಕ್ಷ್ಮಣ್ ಸವದಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್ ಹೈಕಮಾಂಡ್, ಮುಖ್ಯಮಂತ್ರಿಗಳನ್ನು ಕೊಪ್ಪಳ ಜಿಲ್ಲಾ ಗಾಣಿಗೇರ ಸಮಾಜದ ಮುಖಂಡರಾದ ರುದ್ರಮುನಿ ಗಾಳಿಯವರು ಆಗ್ರಹಿಸಿದ್ದಾರೆ.**

ಅವರು ಸೋಮವಾರದಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರ್ಕಾರದ ಇತಿಹಾಸದಲ್ಲಿ ಗಾಣಿಗ ಸಮಾಜದ ಯಾರೊಬ್ಬರಿಗೂ ಮಂತ್ರಿ ಮಂಡಲದಲ್ಲಿ ಸಚಿವ ಸ್ಥಾನ ನೀಡದೆ ಇರುವುದು ಶೋಚನೀಯ ಹಾಗೂ ನೋವಿನ ಸಂಗತಿ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರೇ ಶಾಸಕ ಲಕ್ಷ್ಮಣ ಸವದಿ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆತಂದಿದ್ದಾರೆ, ಬಿಜೆಪಿ ಸರ್ಕಾರದಲ್ಲಿ ಉಪಮುಖ್ಯಮಂತ್ರಿಗಳಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿ ಸಾಕಷ್ಟು ಅನುಭವ ಇದೆ ಹೀಗಾಗಿ ಎರಡನೇ ಪಟ್ಟಿಯಲ್ಲಿ ಲಕ್ಷ್ಮಣ್ ಸವದಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದರು.



ಕೊಪ್ಪಳ ಜಿಲ್ಲಾ ಗಾಣಿಗರ ಸಮಾಜದ ಅಧ್ಯಕ್ಷ ತೋಟಪ್ಪ ಕಾಮನೂರ್ ಮಾತನಾಡಿ ರಾಜ್ಯದಲ್ಲಿ ಗಾಣಿಗ ಸಮಾಜ 40–50 ಲಕ್ಷ ಜನಸಂಖ್ಯೆ ಇದ್ದು ಸಾಮಾಜಿಕ ನ್ಯಾಯದಡಿ ಸಚಿವ ಸ್ಥಾನ ನೀಡಬೇಕು.

ಲಕ್ಷ್ಮಣ ಸವದಿ ಅವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಸಂಘಟನಾ ಸಾಮರ್ಥ್ಯ ಹಾಗೂ ಜನಪ್ರಿಯತೆಯಿಂದ ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಗೆಲ್ಲಲು ಬಹುದೊಡ್ಡ ಕಾಣಿಕೆ ಸಲ್ಲಿಸಿದ್ದಾರೆ, ವಿಧಾನಸಭಾ ಚುನಾವಣೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ನಡೆಸಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಸಾಕಷ್ಟು ಶ್ರಮವಹಿಸಿದ್ದಾರೆ ಹೀಗಾಗಿ ಮುಖ್ಯಮಂತ್ರಿ ಡಿಕೆಶಿ ಅವರು ಎರಡನೇ ಪಟ್ಟಿಯಲ್ಲಿ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಗಾಣಿಗೇರ್ ಸಮಾಜದ ಮುಖಂಡರಾದ ಸಂಗನಗೌಡ ಬಿಟಿ ಪಾಟೀಲ್, ವೀರಣ್ಣ ಗಾಣಿಗೇರ್, ಮಂಜು ಪಾಟೀಲ್ ಹಂದ್ರಾಳ, ಎನ್. ಸಿ ಗೌಡರ, ಸಂಗನಗೌಡ ಪೊಲೀಸ್ ಪಾಟೀಲ್, ಮಾರುತಿ ನಿಲೂಗಲ್, ಶಂಕರಗೌಡ ಮಾಲಿ ಪಾಟೀಲ್ ಉಪಸ್ಥಿತರಿದ್ದರು.

## ಪ್ರಶ್ನೆ ಮಾಡಿದ ರೈತನಿಗೆ ಅವಮಾನ ! ಕೃಷಿ ಅಧಿಕಾರಿಗಳಿಗೆ ಧಿಕ್ಕಾರ ಕೂಗಿದ ರೈತ



ಅ.ಶ. ಸುದ್ದಿ ಕಾರಟಗಿ

**ಕಾರಟಗಿ: ಕನಕಗಿರಿಯ ಶಾಸಕರಿಂದ ಪಟ್ಟಣದಲ್ಲಿ ವಿವಿಧ ಕಾಮಗಾರಿಗಳ ಭೂಮಿ ಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಆ ನಿಟ್ಟಿನಲ್ಲಿ ಶಾಸಕರಾದ ಶಿವರಾಜ್ ಎಸ್ ತಂಗಡಗಿ ಅವರು ಜೂನ್ 07 ರಂದು ರೈತ ಸಂಪರ್ಕ ಕೇಂದ್ರದ ಭೂಮಿ ಪೂಜೆ ಕಾರ್ಯಕ್ರಮಕ್ಕೆ ಬಂದಿರುತ್ತಾರೆ.**

ಈ ಸಂದರ್ಭದಲ್ಲಿ ಪಟ್ಟಣದ ರೈತ ನಾರಾಯಣಪ್ಪ ಈಡಿಗೇರ ಇವರು ಶಾಸಕರು ಎದುರು ಅಧಿಕಾರಿಗಳಿಗೆ ಧಿಕ್ಕಾರವನ್ನು ಕೂಗಿರುತ್ತಾರೆ. ರೈತ ಸಂಪರ್ಕ ಕೇಂದ್ರ ನೂತನ ಕಟ್ಟಡ ನಿರ್ಮಾಣದ ಭೂಮಿ ಪೂಜೆಗೆ ರೈತರಿಗೆ ಆಹ್ವಾನ ನೀಡಿಲ್ಲ. ಅಧಿಕಾರಿಗಳಿಗೆ ಕರೆ ಮಾಡಿದರೆ ಕರೆ ಸ್ವೀಕರಿಸುತ್ತಿಲ್ಲ.ರೈತ ಸಂಪರ್ಕ ಕೇಂದ್ರ ರೈತರಿಗಾಗಿಯೇ ರಾಜ್ಯ ಸರ್ಕಾರ ಸ್ಥಾಪಿಸಲಾಗಿದೆ ಆದರೆ ಕೃಷಿ ಅಧಿಕಾರಿಗಳು ರೈತರಿಗೆ ಮಾಹಿತಿ ನೀಡಿರುವುದಿಲ್ಲ ಎಂದು ಅಧಿಕಾರಿಗಳ ವಿರುದ್ಧ ಧಿಕ್ಕಾರವನ್ನು ಕೂಗಿ ಆಕ್ರೋಶ ಹೊರ ಹಾಕಿದರು.

ಈ ಸಂದರ್ಭದಲ್ಲಿ ಶಾಸಕ ಶಿವರಾಜ್ ತಂಗಡಿಗೆ ಅವರು ರೈತನ ಮಾತಿಗೆ ಸಹನೆ ಕಳೆದುಕೊಂಡಂತೆ ವರ್ತಿಸಿ ರೈತನನ್ನು ಕೈಯಿಂದ ಪಕ್ಕಕ್ಕೆ ತಳ್ಳಿ ಭೂಮಿ ಪೂಜೆ ಕಾರ್ಯಕ್ರಮಕ್ಕೆ ಮುನ್ನಡೆದರು. ಆಗ ಪೊಲೀಸರು ರೈತನನ್ನು ಕರೆದುಕೊಂಡು ಹೋದರು ಬಿಡಿ ಸಾರ್ ಎಂದು ಕೇಳಿಕೊಂಡರು ಪೊಲೀಸರು ಬಿಡದೆ ಸ್ಥಳದಿಂದ ಬೇರೆ ಕಡೆ ಕರೆದುಕೊಂಡು ಹೋದರು. ಈ ಘಟನೆ ರೈತರ ಅಭಿವ್ಯಕ್ತಿ ಸ್ವಾತಂತ್ರವನ್ನು ರೈತರು ಪ್ರಶ್ನೆ ಮಾಡುವುದನ್ನು ಸಂಪೂರ್ಣವಾಗಿ ಹತ್ತಿಕ್ಕಲಾಗಿದೆ ಎಂದು ರೈತರ ಆರೋಪಿಸುತ್ತಿದ್ದಾರೆ.

## ಆಟೋನಗರಕ್ಕೆ ಜಿಲ್ಲಾಧಿಕಾರಿ ಭೇಟಿ ಮೂಲ ಸದಸ್ಯರಿಗೆ ನ್ಯಾಯ ಒದಗಿಸಲು ಭರವಸೆ,,

ಅ.ಶ. ಸುದ್ದಿ ಕಾರಟಗಿ

**ಗಂಗಾವತಿ: ಸುಮಾರು 40 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಆಟೋನಗರಕ್ಕೆ ಜೂನ್–8 ಸೋಮವಾರ ಜಿಲ್ಲಾಧಿಕಾರಿಗಳು ಭೇಟಿ ನೀಡಿ, ಹಿಂದಿನ ಜಿಲ್ಲಾಧಿಕಾರಿಗಳು 2014 ರಲ್ಲಿ ಹೊರಡಿಸಿದ ಆದೇಶದನ್ವಯ ವಿನ್ಯಾಸ ರಚಿಸಿ ಆಟೋನಗರದ ಮೂಲ ಸದಸ್ಯರುಗಳಿಗೆ ನ್ಯಾಯ ಒದಗಿಸಿಕೊಡಲು ಭರವಸೆ ನೀಡಿದರು.**

ಸುಮಾರು 40 ವರ್ಷಗಳ ಹಿಂದೆಯೇ ಗಂಗಾವತಿ ನಗರಸಭೆ ಮಾಲೀಕತ್ವದ ಸರ್ವೆ ನಂ: 139, 139/1 ಒಟ್ಟು ವಿಸ್ತೀರ್ಣ 5–00 ಎಕರೆ ಭೂಮಿಯನ್ನು 1984–85ನೇ ಸಾಲಿನಲ್ಲಿ ಆಟೋನಗರ ನಿರ್ಮಾಣಕ್ಕಾಗಿ ಖರೀದಿಸಲಾಗಿ, ಸದರಿ ಆಟೋನಗರಕ್ಕೆ ವಿನ್ಯಾಸವನ್ನು ತಯಾರಿಸಿ ನಿವೇಶನಗಳನ್ನು ರಚಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಿ ರಾಜ್ಯ ಹೆದ್ದಾರಿಗೆ ಹೊಂದಿಕೊಂಡ ನಿವೇಶನಗಳಿಗೆ ಪ್ರತಿ ಚದರ ಅಡಿಗೆ ರೂ. 15/– ರಂತೆ ಹಾಗೂ ಒಳಗಿನ ನಿವೇಶನಗಳಿಗೆ ರೂ. 7/– ರಂತೆ ಬೆಲೆಯನ್ನು ನಿಗದಿಪಡಿಸಿ ನಗರಸಭೆಯ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಆಗಿನ ಜಿಲ್ಲಾಧಿಕಾರಿಗಳು ದಿ. 27.06.2014 ರಂದು ಆದೇಶ ಹೊರಡಿಸಿ, ನಗರಸಭೆ ಗಂಗಾವತಿ ಇವರು ಸಲ್ಲಿಸಿದ ಪ್ರಸ್ತಾವನೆಯಲ್ಲಿನ ಯಾದಿಯಲ್ಲಿರುವ 90 ಫಲಾನುಭವಿಗಳ ಪ್ರಕಾರ ಸಂಪೂರ್ಣ ಹಣವನ್ನು ಭರಣ ಮಾಡಿರುವ ಫಲಾನುಭವಿಗಳಿಗೆ ನಿವೇಶನವನ್ನು ಹಾಗೂ ಭಾಗಶಃ ಹಣ ಪಾವತಿಸಿರುವ ಫಲಾನುಭವಿಗಳಿಂದ ಪಡೆದಿರುವ ದರದನ್ವಯ ವ್ಯತ್ಯಾಸದ ಮೊತ್ತವನ್ನು ಪಡೆದುಕೊಂಡು, ಹಿರಿಯ ಉಪ ನೋಂದಣಾಧಿಕಾರಿಗಳು ಗಂಗಾವತಿಯವರಿಂದ ನೋಂದಣಿ ಮಾಡಿಕೊಂಡು ನಿವೇಶನಗಳನ್ನು ಫಲಾನುಭವಿಗಳಿಗೆ ಹಂಚಲು ಕ್ರಮವಹಿಸುವಂತೆ ಮತ್ತು ಕರಾರು ಒಪ್ಪಂದ ಪತ್ರದ ಪ್ರಕಾರ ವ್ಯತ್ಯಾಸ ಕಂಡುಬಂದಲ್ಲಿ ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಿನ್ಯಾಸಗಳಿಗೆ ಹೊಂದಾಣಿಕೆ ಮಾಡಿಕೊಂಡು ಸಂಬಂಧಪಟ್ಟ ಫಲಾನುಭವಿಗಳಿಗೆ.



ಸರಿಪಡಿಸುವಿಕೆಯ ಕರಾರು ಪತ್ರ ಮಾಡಿಕೊಂಡು ಸದರಿ ಫಲಾನುಭವಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡುವಂತೆ ಆದೇಶ ಮಾಡಿದ್ದರು. ನಗರಸಭೆಯ ಈಗಿನ ಪೌರಾಯುಕ್ತ ಆರ್. ವಿರುಪಾಕ್ಷಮೂರ್ತಿಯವರು ಆಟೋನಗರದ ನಿವೇಶನಗಳ ವಿನ್ಯಾಸವನ್ನು ಆಟೋನಗರದ ಫಲಾನುಭವಿಗಳಿಗೆ ತಿಳಿಸದೇ ಮತ್ತು ಸರಿಯಾದ ಮಾಹಿತಿ ನೀಡದೇ ತಮಗೆ ಇಷ್ಟಬಂದ ರೀತಿಯಲ್ಲಿ ರಚಿಸಿ, ಕಾರ್ಮಿಕರಿಗೆ ಅನ್ಯಾಯವೆಸಗಿದ್ದರು. ಈ ಬಗ್ಗೆ ಸಾಕಷ್ಟು ಬಾರಿ ಪೌರಾಯುಕ್ತರಿಗೆ ಮನವಿ ಮಾಡಿದರೂ, ಯಾವುದೇ ಪ್ರಯೋಜನವಾಗಿರುವುದಿಲ್ಲ.

ಇಲ್ಲಿನ ಆಟೋನಗರ ಮೂಲ ನಿವಾಸಿಗಳು ಜಿಲ್ಲಾಧಿಕಾರಿಗಳು ಮಧ್ಯಪ್ರವೇಶಿಸಿ ಇಲ್ಲಿನ ಸಮಸ್ಯೆಗಳನ್ನು ಸರಿಪಡಿಸುವಂತೆ ಒತ್ತಾಯಿಸಲಾಗಿತ್ತು. ಅದರಂತೆ ಜೂನ್–8 ಸೋಮವಾರ ಜಿಲ್ಲಾಧಿಕಾರಿಗಳು ಆಟೋನಗರಕ್ಕೆ ಭೇಟಿ ನೀಡಿ, ದಾಖಲೆಗಳನ್ನು ಪರಿಶೀಲಿಸಿ, ಮರು ಸರ್ವೆ ಮಾಡಿ ಇಲ್ಲಿನ ಮೂಲ ನಿವಾಸಿಗಳು ನಾಲ್ಕು ದಶಕಗಳ ಕಾಲ ಎದುರಿಸುತ್ತಿದ್ದ ಸಮಸ್ಯೆಗಳಿಗೆ ಜಿಲ್ಲಾಧಿಕಾರಿಗಳು ಸ್ಪಂದಿಸಿ, ಎಲ್ಲಾ ಮೂಲ ಸದಸ್ಯರಿಗೆ ನ್ಯಾಯ ಒದಗಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಆಟೋನಗರದ ಮೂಲನಿವಾಸಿಗಳಾದ ಹುಸೇನಸಾಬ್, ಕಟ್ಟಾ ರಾಜ, ಬಿ. ಪ್ರಕಾಶ, ಡಿ.ಎಲ್. ಮೇರಿ, ಆರೋಗ್ಯ ಮೇರಿ, ಚಾಂದ್, ಗೌಸ್ ಪೀರ್, ಖಲೀಲ್ ಟಿಂಕರ್, ಸಲೀಂ ಟಿಂಕರ್, ಭಾಷಾ ಲಾರಿ ಮೆಕ್ಯಾನಿಕ್, ಬಿ. ಶ್ರೀನಿವಾಸ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka